# ಸಮರ್ಥ ರಾಮದಾಸರು

ಎಂ. ಗೌರಿ

*ದೇಶಭಕ್ತ ಸಂತಶ್ರೇಷ್ಠ ರಾಮದಾಸರ ಸಂಕ್ಷಿಪ್ತ ಜೀವನಚಿತ್ರವನ್ನು ನೀಡಿರುವ ಶ್ರೀಮತಿ ಎಂ.ಗೌರಿಯವರು ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರು.*

ಶಾಲಿವಾಹನ ಶಕ ೧೫೩೦ (ಕ್ರಿ.ಶ. ೧೬೦೮)ರ ಚೈತ್ರ ಶುದ್ಧ ನವಮಿಯ ದಿನದಂದು ನಾರಾಯಣನ ಜನನವಾಯಿತು. ಈ ನಾರಾಯಣನೇ ಮುಂದೆ 'ಸಮರ್ಥ ರಾಮದಾಸ' ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆಯುತ್ತಾನೆ. ಭಗವಾನ್ ಶ್ರೀರಾಮಚಂದ್ರರ ಜನ್ಮತಿಥಿಯ ದಿನ ಮತ್ತು ಸರಿಯಾಗಿ ಅದೇ ವೇಳೆಗೆ ನಾರಾಯಣನ ಜನನವಾಗಿದ್ದು. ಇದೊಂದು ಅಪೂರ್ವ ಯೋಗಾಯೋಗವೆಂದು ಹೇಳಲಾಗಿದೆ.

ರಾಮದಾಸರು ಹುಟ್ಟಿದ್ದು ಗೋದಾವರಿ ನದಿಯ ದಂಡೆಯಲ್ಲಿದ್ದ ಜಾಂಬ್ ಎಂಬ ಪುಟ್ಟ ಹಳ್ಳಿಯಲ್ಲಿ. ತಂದೆ ಸೂರ್ಯಾಜಿ ಪಂತ, ತಾಯಿ ರಾಣೂಬಾಯಿ, ಅಣ್ಣ ಗಂಗಾಧರ. ಇವರು ಠೋಸರ ಮನೆತನದವರು. ಸೂರ್ಯಾಜಿ ಪಂತರು ಅತೀವ ಸಾತ್ವಿಕ ಹಾಗೂ ಧಾರ್ಮಿಕ ಪ್ರವೃತ್ತಿಯವರಾಗಿದ್ದರು. ಅವರು ಕುಟುಂಬದಲ್ಲಿ ಅನುವಂಶಿಕವಾಗಿ ಬಂದ ಸೂರ್ಯೋಪಾಸನೆಯನ್ನು ನಿಯಮ, ನಿಷ್ಠೆಯಿಂದ ಆಚರಿಸುತ್ತಿದ್ದರು. ದಿನನಿತ್ಯ ಒಂದು ಸಾವಿರ ಸೂರ್ಯನಮಸ್ಕಾರಗಳನ್ನು ಹಾಕುತ್ತಿದ್ದರು ಹಾಗೂ ಹನ್ನೆರಡುನೂರು ಗಾಯತ್ರೀ ಮಂತ್ರಗಳನ್ನು ಜಪಿಸುತ್ತಿದ್ದರು. ಶ್ರೀರಾಮಚಂದ್ರನ ಉಪಾಸನೆಯನ್ನೂ ಸಹ ಸೂರ್ಯಾಜಿ ಪಂತರು ಮಾಡುತ್ತಿದ್ದರು. ಪ್ರತಿ ವರುಷ ರಾಮೋತ್ಸವವನ್ನು ಅವರು ದೊಡ್ಡ ಪ್ರಮಾಣದಲ್ಲಿ ಆಚರಿಸುತ್ತಿದ್ದರು. ಸಮರ್ಥರ ಜನ್ಮವಾಗುವುದಕ್ಕಿಂತ ಮೊದಲು ಸೂರ್ಯನಾರಾಯಣ ಮತ್ತು ಪ್ರಭು ಶ್ರೀರಾಮಚಂದ್ರನ ದರ್ಶನವು ಸೂರ್ಯಾಜಿ ಪಂತರಿಗೆ ಆಗಿತ್ತೆಂಬ ವಿಷಯವನ್ನು ಹಿಂದಿನ ಚರಿತ್ರಕಾರರು ವರ್ಣಿಸಿದ್ದಾರೆ. ಸಮರ್ಥರ ತಾಯಿ ರಾಣೂಬಾಯಿ ಕೂಡ ಪತಿಯಂತೆ ಧಾರ್ಮಿಕ ಪ್ರವೃತ್ತಿಯವರಾಗಿದ್ದರು.

ತಂದೆತಾಯಿಗಳ ನೆಚ್ಚಿನ ಮಗನಾಗಿ ನಾರಾಯಣನು ಬೆಳೆಯುತ್ತಿದ್ದ. ಅಣ್ಣ ಗಂಗಾಧರ ಗಂಭೀರ ಸ್ವಭಾವದವನಾದರೆ ತಮ್ಮ ನಾರಾಯಣ ಇದಕ್ಕೆ ತದ್ವಿರುದ್ಧ. ಆತನ ತುಂಟಾಟ ಮತ್ತು ಕಿಡಿಗೇಡಿತನಕ್ಕೆ ಇತಿಮಿತಿಯೇ ಇರಲಿಲ್ಲ. ಜಗಳಗಂಟ ಪ್ರವೃತ್ತಿಯವನಾದ ನಾರಾಯಣನು ತನ್ನ ಮನಬಂದಂತೆ ನಡೆಯತಕ್ಕವನಾಗಿದ್ದನು. ಹಾಗೂ ಪ್ರಾರಂಭದಿಂದ ನಾರಾಯಣನಿಗೆ ಭಯವೆಂದರೇನೆಂದೇ ಗೊತ್ತಿರಲಿಲ್ಲ. ಬಾಲ್ಯದಲ್ಲಿ ಆತನಿಗೆ ಕಳ್ಳರ ಭೀತಿ ಇರದೆ, ನಿರ್ಭಯನಾಗಿ ಹೊರಗೆ ತಿರುಗಾಡುವ ಮೋಹವು ಅಧಿಕ



ಸಮರ್ಥ ರಾಮದಾಸರು

ವಾಗಿತ್ತು. ತಾಸುಗಟ್ಟಲೆ ನದೀನೀರಿನಲ್ಲಿ ಈಜುವುದು, ಗೋಲಿ ಆಡುವುದು, ಮರ ಏರುವುದು, ಎತ್ತರದಿಂದ ಜಿಗಿಯುವುದು—ಇವೇ ನಾರಾಯಣನ ಹವ್ಯಾಸಗಳಾಗಿದ್ದುವು. ಹೀಗೆ ಒಮ್ಮೆ ಒಂದು ಮರದಿಂದ ಆವೇಶದಲ್ಲಿ ಕೆಳಗೆ ನದಿಗೆ ಹಾರಿದಾಗ ನಾರಾಯಣನ ಕೆನ್ನೆಗೆ ಪೆಟ್ಟು ತಾಗಿ ಆದ ಕಲೆ ಮುಂದೆ ಆಜೀವಪರ್ಯಂತ ಬಾಲ್ಯಸಾಹಸದ ಕುರುಹಾಗಿ ಉಳಿದುಬಿಟ್ಟಿತು. ಅಸಾಮಾನ್ಯ ಶಕ್ತಿ ಸಾಮರ್ಥ್ಯಗಳಿದ್ದ ನಾರಾಯಣನನ್ನು 'ಸಾಕ್ಷಾತ್ ಮಾರುತಿಯ ಅವತಾರವೆಂದು ಕೌತುಕದಿಂದ ಹೇಳಲಾಗುತ್ತಿತ್ತು.

ನಾರಾಯಣನಿಗೆ ಸದಾ ಸಂಗಡಿಗರನ್ನು ಸೇರಿಸಿಕೊಂಡು ಆಡುವುದು, ಕಾಡುಮೇಡು ಸುತ್ತುವುದೇ ಹವ್ಯಾಸವಾಗಿತ್ತು. ಈ ಬಗೆಯ ಪ್ರವೃತ್ತಿಯಿಂದ ಮನೆಯ ಯಾವ ಕೆಲಸದ ಕಡೆಯೂ ಗಮನವಿರದೆ, ಮನೆಯ ಕೆಲಸದಲ್ಲಿ ನಾರಾಯಣನು ಸಹಾಯಕನಾಗುವನೆಂಬ ಭರವಸೆ ತಾಯಿಗೆ ಎಂದೂ ಇರುತ್ತಿರಲಿಲ್ಲ. ಒಮ್ಮೆ ಮನೆಯಲ್ಲಿ ಒಂದು ಧಾರ್ಮಿಕ ಕಾರ್ಯವಿತ್ತು. ಬಹಳಷ್ಟು ಜನ ಊಟಕ್ಕೆ ಬರುವವರಿದ್ದರು. ಸಹಜವಾಗಿ ರಾಣೂಬಾಯಿ ಮಗನಿಗೆ ಹೇಳಿದರು, "ನಾರೋಬಾ, ನಾಳೆ ಮನೆಯಲ್ಲಿ ಊಟವಿದೆ. ಮಜ್ಜಿಗೆ ಬೇಕಾಗಬಹುದು. ಆದರೆ ನಿನಗೆ ಹೇಳಿ ಏನು ಪ್ರಯೋಜನ?" ಈ ಉದ್ಗಾರವನ್ನು ಕೇಳಿದ ನಾರಾಯಣನು ಮಾಡಿದ್ದೇನು? ಅಲ್ಲಿಂದ ಎದ್ದು ಗ್ರಾಮದ ಕುಂಬಾರರ ಮನೆಗೆ ಹೋಗಿ, ಅವರಿಂದ ಹತ್ತು-ಹನ್ನೆರಡು ಗಡಿಗೆಗಳನ್ನು ಬೇಡಿ ಪಡೆದನು. ಸಾಯಂಕಾಲ ಆ ಸಣ್ಣ ಗಡಿಗೆಗಳನ್ನು ತನ್ನ ಪರಿಚಿತರ

ಬೇರೆ-ಬೇರೆ ಮನೆಗಳಿಗೆ ಹೋಗಿ ಇಟ್ಟನು. "ನಾಳೆ ಮುಂಜಾನೆ ಮಜ್ಜಿಗೆ ಬೇಕು" ಎಂದು ಪ್ರತಿ ಮನೆಯಲ್ಲೂ ಹೇಳಿದನು. ಮರು ದಿನ ಬೆಳಿಗ್ಗೆ ತೀರ ನಸುಕಿನಲ್ಲಿ ಆ ಎಲ್ಲ ಮನೆಗಳಿಗೆ ಮತ್ತೆ ಹೋಗಿ ಆ ಗಡಿಗೆಗಳನ್ನು ಸಂಗ್ರಹಿಸಿ ತಂದು ಮೆಲ್ಲಗೆ ತಮ್ಮ ಅಡುಗೆ ಮನೆಯಲ್ಲಿ ಇಟ್ಟುಬಿಟ್ಟನು. ಬೆಳಿಗ್ಗೆ ರಾಣೂಬಾಯಿ ಎದ್ದಬಳಿಕ ನೋಡುತ್ತಾರೆ, ಅಡುಗೆ ಮನೆಯ ಎಲ್ಲ ಕಡೆ ಮಜ್ಜಿಗೆ ತುಂಬಿದ ಗಡಿಗೆಗಳೇ.

ಒಮ್ಮೆ ಒಬ್ಬ ಗ್ರಾಮಾಧಿಕಾರಿ ಸೂರ್ಯಾಜಿ ಪಂತರ ಭೇಟಿಗಾಗಿ ಬಂದಿದ್ದರು. ಆಗ ಪಂತರು ಪೂಜಾಕಾರ್ಯದಲ್ಲಿ ಮಗ್ನರಾಗಿದ್ದುದರಿಂದ ಹೊರಗೆ ಕೂಡಲು ಸ್ಥಳವಿಲ್ಲದೆ ಆ ಅಧಿಕಾರಿ ಹಾಗೇ ನಿಲ್ಲಬೇಕಾಯಿತು. ಆಗ ಪಂತರು ಸಹಜವಾಗಿ "ಮನೆಯಲ್ಲಿ ಅಧ್ಯಾತ್ಮ ನಡೆದಿದೆ. ಹೊರಗೆ ಯಾರಾದರೂ ನನ್ನ ಭೇಟಿಗಾಗಿ ಬಂದರೆ ಕುಳಿತುಕೊಳ್ಳಲು ಹೇಳಲು ಸರಿಯಾದ ಒಂದು ಸ್ಥಳವೂ ಇಲ್ಲ" ಎಂದು ಬೇಸರಪಟ್ಟರು. ಇದನ್ನು ಕೇಳಿದವನೇ ನಾರಾಯಣನು ಕೂಡಲೆ ತನ್ನ ಸ್ನೇಹಿತರನ್ನು ಸೇರಿಸಿ ಅವರೆಲ್ಲರ ಸಹಾಯದಿಂದ ಅರಣ್ಯದಿಂದ ಕಟ್ಟಿಗೆ ಕಡಿದು ತಂದು, ಇಡೀ ರಾತ್ರಿ ಗೋಡೆಗಳನ್ನು ಎಬ್ಬಿಸಿ, ಬೆಳಗಾಗುವಷ್ಟರಲ್ಲಿ ಒಂದು ಕೋಣೆಯನ್ನು ಸಿದ್ಧಪಡಿಸಿಬಿಟ್ಟನು. ಅವಶ್ಯವಿದ್ದ ಕೆಲಸಗಳನ್ನು ನಿರ್ವಹಿಸುವ ಅದ್ಭುತ ಸಾಮರ್ಥ್ಯ, ಜಾಣ್ಮೆ, ಕುಶಲತೆ ಹಾಗೂ ಸಾಹಸ ಪ್ರವೃತ್ತಿ ಮುಂತಾದುವನ್ನು ನಾವು ನಾರಾಯಣನಲ್ಲಿ ಚಿಕ್ಕಂದಿನಲ್ಲೇ ಕಾಣಬಹುದಾಗಿತ್ತು.

ಹೀಗೆಯೇ ನಾರಾಯಣನ ಅಲೆದಾಟ, ಮನೆಯ ಕಡೆ ಅಲಕ್ಷ್ಯ ನಡೆದೇ ಇತ್ತು. ಇದರ ಬಗ್ಗೆ ರಾಣೂಬಾಯಿ ತಮ್ಮ ಆತಂಕವನ್ನು ವ್ಯಕ್ತಪಡಿಸುತ್ತ "ನಾರೋಬಾ, ಮನೆಯತ್ತ ನಿನಗೆ ಚಿತ್ತವಿಲ್ಲ. ಗಂಡಸರಿಗೆ ಒಂದಿಷ್ಟು ಸಂಸಾರದ ಚಿಂತೆ ಇರಬೇಕಾಗುತ್ತದೆ" ಎಂದರು. ಇದನ್ನು ಕೇಳಿದವನೇ ನಾರಾಯಣನು ಒಂದು ಕತ್ತಲೆಯ ಕೋಣೆಯಲ್ಲಿ ಹೋಗಿ ಕುಳಿತುಬಿಟ್ಟನು. ಇತ್ತ ರಾಣೂಬಾಯಿ ತಮ್ಮ ಕೆಲಸದಲ್ಲಿ ತೊಡಗಿಕೊಂಡರು. ಬಹಳಷ್ಟು ವೇಳೆಯಾಯಿತು. ಸಂಜೆಯೂ ಆಯಿತು. ಎಲ್ಲ ಕಡೆಯೂ ನಾರಾಯಣನ ಹುಡುಕಾಟವಾಯಿತು. ನಾರಾಯಣ ಎಲ್ಲೂ ಇಲ್ಲ. ತಾಯಿಗೆ ಚಿಂತೆ. ಯಾವುದೋ ಕೆಲಸದ ನಿಮಿತ್ತ ನಾರಾಯಣ ಕುಳಿತ ಕೋಣೆಗೆ ಹೋದರು. ಅಲ್ಲಿ ಕತ್ತಲಲ್ಲಿ ಏನೋ ಕಾಲಿಗೆ ತಾಕಿದಂತಾಗಿ ಭಯಪಟ್ಟರು. ಮಗ ಅಲ್ಲಿಯೇ ಕುಳಿತಿದ್ದಾನೆ. ಆಗ ಅವರು "ಎಲಾ, ಇಲ್ಲಿ ಕುಳಿತು ಏನನ್ನು ಮಾಡುತ್ತಿರುವಿ?" ಎಂದರು. ಆಗ ನಾರಾಯಣನು, "ಅಮ್ಮಾ ಜಗತ್ತಿನ ಚಿಂತೆ ಮಾಡುತ್ತಿರುವೆ" ಎಂದು ಉತ್ತರಿಸಿದನು. ಹೀಗೆ ನಾರಾಯಣನು ಮುಂದೆ ಜಗತ್ತಿನ ಚಿಂತೆ ಮಾಡಿದ್ದು ಸತ್ಯವೇ ಆಗಿತ್ತು.

ಮುಂದೆ ನಾರಾಯಣನ ಉಪನಯನವಾಯಿತು. ಕೂಡಲೇ ವೇದಪಾಠಗಳು, ಸಂಸ್ಕೃತದ ಅಧ್ಯಯನ ಹಾಗೂ ವ್ಯಾವಹಾರಿಕ ಶಿಕ್ಷಣವನ್ನು ತನ್ನ ಗುರುಗಳಿಂದ ನಾರಾಯಣನು ಬಹಳ ಬೇಗ ಪಡೆದುಕೊಂಡನು. ನಾರಾಯಣನು ಎಷ್ಟು ತುಂಟನಿದ್ದನೋ ಅಷ್ಟೇ ಬುದ್ಧಿವಂತನಾಗಿದ್ದನು. ನಾರಾಯಣನ ಹುಡುಗಾಟಿಕೆಯ ಸ್ವಭಾವ ಹೋಗಬೇಕಾದರೆ ಮದುವೆಯೇ ಮದ್ದು ಎಂದು ರಾಣೂಬಾಯಿ ನಾರಾಯಣನಲ್ಲಿ ಮದುವೆಯ ಪ್ರಸ್ತಾಪ ಮಾಡಿದರು. ಆದರೆ ನಾರಾಯಣ "ನಾ ಮದುವೆ ಆಗುವುದಿಲ್ಲ" ಎಂದು ಖಡಾಖಂಡಿತವಾಗಿ ಹೇಳಿದ. ತಾಯಿ ವಿವಾಹದ ಮಾತೆತ್ತಿದರೆ ಸಾಕು ನಾರಾಯಣ ಎಲ್ಲಿಯಾದರೂ ಹೊರಟುಹೋಗುತ್ತಿದ್ದ.

ಹೀಗೆ ಒಂದು ಸಲ ಊರ ಹೊರಗಿನ ಆಂಜನೇಯನ ದೇವಸ್ಥಾನದಲ್ಲಿ ಕುಳಿತಿದ್ದ ನಾರಾಯಣ. ಆತನ ಮನಸ್ಸು ಹನುಮಂತನಲ್ಲಿ ನೆಟ್ಟಿತ್ತು. ಅಖಂಡ ಬ್ರಹ್ಮಚಾರಿ, ರಾಮದಾಸ ಹನುಮಂತ! ಎಂಥಾ ಬಲಶಾಲಿ! ಇಂಥ ಪರಮಭಕ್ತ ಮಾರುತಿಯ ಮೂರುತಿಯನ್ನು ನೋಡುತ್ತಿದ್ದಂತೆ, ನಾರಾಯಣನು ಮನದಲ್ಲೇ ಪ್ರತಿಜ್ಞೆ ಮಾಡಿಕೊಂಡ: "ನಾನೂ ಬ್ರಹ್ಮಚಾರಿಯಾಗಿ ಉಳಿದು ಬಲವಂತನಾಗಬೇಕು. ಬುದ್ಧಿವಂತನಾಗಬೇಕು." ಅಂದಿನಿಂದ ನಾರಾಯಣನ ನಡತೆಯಲ್ಲಿ ಬದಲಾವಣೆ ತೋರಿತು. ಈಗ ನಾರಾಯಣ ಸದಾ ಮೌನವಾಗಿರುತ್ತಿದ್ದ, ಯಾವುದೋ ಚಿಂತನದಲ್ಲಿ ಮುಳುಗಿರುತ್ತಿದ್ದ. ಇದನ್ನು ಗಮನಿಸಿದವರೇ ರಾಣೂಬಾಯಿ ಈ ಹುಡುಗನಿಗೆ ಬೇಗ ಮದುವೆ ಮಾಡಿಬಿಡುವುದೇ ಸರಿಯೆಂದು ಎಣಿಸಿ, ತನ್ನ ಒಂದು ಮಾತು ನಡೆಸಿಕೊಡುತ್ತೇನೆಂದು ನಾರಾಯಣನಿಂದ ಮಾತು ತೆಗೆದುಕೊಂಡರು. "ಅಂತರ್ಪಟ ಹಿಡಿಯುವವರೆಗೂ ನೀ ಯಾವುದಕ್ಕೂ ಇಲ್ಲವೆಂದು ಅನ್ನಬೇಡ" ಎಂದರು. ನಾರಾಯಣನು "ನಿನ್ನ ಅಪ್ಪಣೆಯಂತಾಗಲಿ" ಎಂದು ಮೊದಲಿನಂತೆ ವಿರೋಧಿಸುವುದನ್ನು ಬಿಟ್ಟನು.

ಮದುವೆಯ ಮುಹೂರ್ತ ಸಮೀಪಿಸಿತು. ಅಂತರ್ಪಟದ ಇಬ್ಬದಿಗೆ ಎದುರು ಬದುರಾಗಿ ಮದುಮಗ ನಾರಾಯಣ ಮತ್ತು ಮದುಮಗಳು ನಿಂತಿದ್ದರು. ಪುರೋಹಿತರು ತಾರಕಸ್ವರದಲ್ಲಿ ಮಂಗಲಾಷ್ಟಕಗಳನ್ನು ಘೋಷಿಸುತ್ತಿದ್ದರು. ಮಂಗಲಾಷ್ಟಕದ ಕೊನೆಗೆ "ಸುಮುಹೂರ್ತೇ ಸಾವಧಾನ" ಎಂಬ ಘೋಷಣೆ ಮೊಳಗುತ್ತಲೆ ನಾರಾಯಣನ ಕಿವಿಗಳು ಚುರುಕಾದವು. 'ಸಾವಧಾನ' ಎಂಬ ಎಚ್ಚರಿಕೆಯ ಪದ ಕಿವಿಗೆ ಬೀಳುತ್ತಲೇ ನಾರಾಯಣ ಎಚ್ಚರಗೊಂಡ. "ನಾನು ಸಂಸಾರದ ಸಂಕೋಲೆಯಲ್ಲಿ ಸಿಲುಕಿಕೊಳ್ಳಕೂಡದು. ಅಂತರ್ಪಟ ಸರಿಯುವ ಮೊದಲೇ ನಾನು ಇಲ್ಲಿಂದ ಕಾಲು ಕೀಳಬೇಕು" ಎಂದು ನಿರ್ಧರಿಸಿದವನೆ, ಏನಾಗುತ್ತಲಿದೆ ಎಂದು ಯಾರೂ ತಿಳಿಯುವ ಮೊದಲೇ ವಾಯುವೇಗದಿಂದ ಮಂಟಪದಿಂದ ಹೊರಟುಬಿಟ್ಟನು. ನಾರಾಯಣನ ಬಾಲ್ಯ ಇಲ್ಲಿಗೆ ಮುಗಿಯಿತು. ಕೇವಲ ಹನ್ನೆರಡು ವರ್ಷದವನಾದ ಈ ಹುಡುಗನು ಪರಮಾರ್ಥ ಸಾಧನಕ್ಕಾಗಿ, ರಾಮದಾಸನಾಗುವುದಕ್ಕಾಗಿ ಮನೆಮಾರು ತ್ಯಜಿಸಿದನು.

ಲಗ್ನವೇದಿಕೆಯಿಂದ ಹೊರಟ ನಾರಾಯಣನು ನೇರವಾಗಿ

ಗೋದಾವರಿ ನದಿಯ ದಡದಲ್ಲಿನ ಪಂಚವಟಿಗೆ ಬಂದನು. ನಾಸಿಕದ ಪುಣ್ಯಕ್ಷೇತ್ರದಲ್ಲಿ ಪಂಚವಟಿಯ ಪರಿಸರದಲ್ಲಿ ನಾರಾಯಣನಿಗೆ ತನ್ನ ಬದುಕಿನ ನೆಲೆ, ಜೀವನರೀತಿ ಸ್ಪಷ್ಟವಾಯಿತು. ಮುಂದೆ ಹನ್ನೆರಡು ವರ್ಷಗಳ ಕಾಲ ಆತ ಪಂಚವಟಿಯ ಮಂಗಲಧಾಮದಲ್ಲಿ ಧ್ಯಾನ, ತಪಶ್ಚರ್ಯೆ ಕೈಗೊಂಡ. ಬೆಳಗಿನ ಜಾವ ೪ ಗಂಟೆಗೇ ನಾರಾಯಣ ಏಳುವನು. ಸಂಗಮದಲ್ಲಿ ಸ್ನಾನ, ಸಂಧ್ಯಾವಂದನೆ, ಧ್ಯಾನಗಳನ್ನು ಮಾಡುವನು. ನಂತರ ನದಿಯ ಪಾತ್ರದಲ್ಲಿ ನಡುಮಟ್ಟ ನೀರಿನಲ್ಲಿ ನಿಂತು ರಾಮನಾಮವನ್ನು ಜಪಿಸುತ್ತಿದ್ದನು. ಮೇಲೆ ಬಿಸಿಲಿನ ಝಳ ಹೆಚ್ಚಾಗುತ್ತಿದ್ದಂತೆ ಕೆಳಗೆ ನೀರಿನಲ್ಲಿ ಮೀನುಗಳು ಕಾಲನ್ನು ಕಚ್ಚುತ್ತಲಿದ್ದವು. ಆದರೆ ನಾರಾಯಣನಿಗೆ ಇದರ ಕಡೆ ಲಕ್ಷ್ಯವೇ ಇರಲಿಲ್ಲ. ಧ್ಯಾನ ಮುಗಿದನಂತರ ಕೆಲವು ಮನೆಗಳಿಗೆ ಹೋಗಿ ಭಿಕ್ಷೆ ಬೇಡಿ, ತಂದದ್ದರಲ್ಲಿ ಮೂರು ಪಾಲು ಮಾಡಿ, ಒಂದು ಗೋವುಗಳಿಗೆ, ಒಂದು ಮೀನುಗಳಿಗೆ ಮತ್ತೊಂದು ಶ್ರೀರಾಮನಿಗೆ ನೈವೇದ್ಯ ತೋರಿ ಪ್ರಸಾದವೆಂದು ಸ್ವೀಕರಿಸುತ್ತಿದ್ದನು. ದಿನದ ಉಳಿದ ಸಮಯವನ್ನು ಸ್ವಾಧ್ಯಾಯ ಪ್ರವಚನ ಹಾಗೂ ಹರಿಕಥೆ ಕೇಳುವುದರಲ್ಲಿ, ಹರಿಭಜನೆಯಲ್ಲಿ ಕಳೆಯುತ್ತಿದ್ದನು.

ಇಂತಹ ಅಖಂಡ ತಪಶ್ಚರ್ಯೆಯಿಂದಾಗಿ ನಾರಾಯಣನ ದೇಹ ಪುಟಕ್ಕಿಟ್ಟ ಚಿನ್ನದಂತೆ ಹೊಳೆಯತೊಡಗಿತು. ಈ ಸುದೀರ್ಘ ಧ್ಯಾನ ಮತ್ತು ಚಿಂತನದಿಂದ ಆತನ ಬುದ್ಧಿ ಹರಿತವಾಯಿತು. ಈಗ ನಾರಾಯಣನಲ್ಲಿ ತನ್ನ ತಾಯಿ ಮತ್ತು ತಾಯ್ನಾಡಾದ ಭರತವರ್ಷದ ಬಗ್ಗೆ ಪ್ರೇಮಭಾವನೆ ಉಕ್ಕಿ ಹರಿಯತೊಡಗಿತು. ಸ್ವತಃ ತನ್ನನ್ನು ರಾಮದಾಸರೆಂದು ಗುರುತಿಸಿಕೊಂಡು ಇಡೀ ಭಾರತದ ಪರ್ಯಟನೆಯನ್ನು ಮಾಡುವ ಸಂಕಲ್ಪ ಮಾಡಿದರು.

ರಾಮದಾಸರು "ಸಮರ್ಥ"ರೆಂದು ಜನಮನದಲ್ಲಿ ಗುರುತಿಸಲ್ಪಡಲು ಒಂದು ಪ್ರಸಂಗ ನಡೆಯಿತು. ರಾಮದಾಸರು ತಮ್ಮ ತಪಸ್ಸನ್ನು ಪ್ರಾರಂಭಮಾಡಿದ ಮೂರು ವರ್ಷಗಳಲ್ಲಿ ಟಾಕಳಿಯ ದಶಪಂಚಕ ಎಂಬ ಗ್ರಾಮದಲ್ಲಿ ಗಿರಿಧರಪಂತ ಕುಲಕರ್ಣಿ ಎಂಬ ಗೃಹಸ್ಥನು ತಾರುಣ್ಯದಲ್ಲಿಯೇ ಕ್ಷಯರೋಗದಿಂದ ಪೀಡಿತನಾಗಿ ಮರಣ ಹೊಂದಿದ್ದನು. ಆತನ ಪತ್ನಿ ಅನ್ನಪೂರ್ಣೆ ಸಹಗಮನಕ್ಕೆ ಸಿದ್ಧಳಾಗಿ ಪತಿಯ ಶವದೊಂದಿಗೆ ಟಾಕಳಿಯ ಸಂಗಮಕ್ಕೆ ಬಂದಳು. ಅಲ್ಲಿ ತಪಸ್ಸು ಮಾಡುತ್ತಿದ್ದ ರಾಮದಾಸರನ್ನು ನೋಡಿ, ಅವರನ್ನು ಸತ್ಪುರುಷರೆಂದು ತಿಳಿದು ಅವರಿಗೆ ವಂದಿಸಿದಳು. ಆಗ ರಾಮದಾಸರು ಆಶೀರ್ವಾದದ ರೂಪದಲ್ಲಿ "ಅಷ್ಟಪುತ್ರ ಸೌಭಾಗ್ಯವತೀ ಭವ" ಎಂದು ನುಡಿದರು. "ಈ ಆಶೀರ್ವಾದವು ಈ ಜನ್ಮದಲ್ಲಿ ಸಫಲವಾಗುವುದೋ ಅಥವಾ ಮುಂದಿನ ಜನ್ಮದಲ್ಲಿಯೋ?" ಎಂದು ಆಕೆ ಕೇಳಿದಳು. ಇದನ್ನು ಕೇಳಿ ರಾಮದಾಸರು ಆಶ್ಚರ್ಯಚಕಿತರಾಗಿ ಸುತ್ತಲೂ ಗಮನ ಹರಿಸಲು ಅಲ್ಲಿ ಆಕೆಯ ಪತಿಯ ಶವ, ಜೊತೆಗೆ ಆಕೆಯ ಬಂಧುಗಳನ್ನು ನೋಡಿ ಗೊಂದಲಕ್ಕೀಡಾದರು. ಆದರೆ ಮುಖದಿಂದ ಶಬ್ದ ಹೊರಟುಬಿಟ್ಟಿತ್ತು. ಅವರು ಶವವನ್ನು ತಮ್ಮ ಮುಂದೆ ತರಲು ಹೇಳಿ, ಮನಸ್ಸಿನಲ್ಲಿ ಪ್ರಭು ರಾಮಚಂದ್ರನ ಸ್ಮರಣೆ ಮಾಡಿ, ದೇಹದ ಮೇಲೆ ಗಂಗೋದಕವನ್ನು ಸಿಂಪಡಿಸಿದರು. ಆಗ ಗಿರಿಧರನು "ರಾಮ ರಾಮ" ಎಂದೆನ್ನುತ್ತ ಎದ್ದು ಕುಳಿತನು. ಅನಂತರ ಜನರು ರಾಮದಾಸರನ್ನು ನೋಡುವ ರೀತಿಯೇ ಬೇರೆಯಾಯಿತು.

ರಾಮದಾಸರು ಭಾರತದ ಪ್ರತಿಯೊಂದು ಹಳ್ಳಿ, ಊರು, ಕೇರಿಯನ್ನಲ್ಲದೆ ಭಾರತದ ಪ್ರತೀಕ ಸ್ವರೂಪವಾಗಿ ಸಕಲೆಡೆಗೂ ಹರಡಿದ ಎಲ್ಲ ತೀರ್ಥಕ್ಷೇತ್ರಗಳನ್ನು ನೋಡಿ, ಭಾರತದ, ಭಾರತೀಯ ಜನತೆಯ ಸಮಗ್ರದರ್ಶನ ಪಡೆಯಬೇಕೆಂದು ದೀರ್ಘಪ್ರಯಾಣ ಬೆಳೆಸಿದರು. ಆಯಾಸವಾದಾಗ ಸಿಕ್ಕ ಹಳ್ಳಿಯಲ್ಲಿ ನಿಂತು ಭಿಕ್ಷಾಟನೆಯಿಂದ ಹಸಿವನ್ನು ಕಳೆದುಕೊಂಡು ಮತ್ತೆ ಮುಂದೆ ಪ್ರಯಾಣ ಮುಂದುವರಿಸುತ್ತಿದ್ದರು. ಈಗ ಸಮರ್ಥರ ಶರೀರದ ಮೇಲೆ ಕಾವಿಬಟ್ಟೆಗಳಿದ್ದವು. ಮಸ್ತಕದ ತುಂಬಾ ಜಡೆ, ಎದೆಯ ಮೇಲೆ ಇಳಿಬಿದ್ದ ಗಡ್ಡ, ಕಣ್ಣಲ್ಲಿ ಜ್ಞಾನದ, ತಪಸ್ಸಿನ ಅನುಭವದ ತೇಜಸ್ಸು.

ತಮ್ಮ ದೀರ್ಘಪ್ರವಾಸದಲ್ಲಿ ತಾವು ಕಂಡ ಭಾರತದ ದುರವಸ್ಥೆಯನ್ನು ರಾಮದಾಸರು ತಮ್ಮ ಪದ್ಯದಲ್ಲಿ ಹೀಗೆ ವರ್ಣಿಸಿದ್ದಾರೆ : "ಪರಕೀಯರ ಧಾಳಿಗಳಿಂದಾಗಿ ಲೂಟಿ ಮಾಡಲ್ಪಟ್ಟ ಹಳ್ಳಿಗಳು ನಿರ್ಜನವಾಗಿವೆ, ಭೂಮಿಗಳು ಉಳುವವರಿಲ್ಲದೆ ಪಾಳು ಬಿದ್ದಿವೆ. ಜನರಿಗೆ ತಿನ್ನಲು ಅನ್ನವಿಲ್ಲ. ಹಾಸಲು ಹೊದೆಯಲು ಬಟ್ಟೆಗಳಿಲ್ಲ. ನಿವಾಸಕ್ಕಾಗಿ ಸಾಮಾನ್ಯ ಗುಡಿಸಲೂ ಇಲ್ಲ. ದುಬಾರಿ ಬೆಲೆಗಳಿಂದ ಅವರ ಜೀವನ ಕಷ್ಟವಾಗಿದೆ. ಎಷ್ಟೋ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಉಳಿದವರಿಗೆ ಬದುಕೇ ಬೇಡವಾಗಿದೆ." ಅವರ ಹೃದಯ "ಪ್ರಭೋ ರಾಮಚಂದ್ರ ಇವರು ಈ ದುಃಖದಿಂದ ಎಂದು ಬಿಡುಗಡೆ ಹೊಂದುವರು?" ಎಂದು ಮೊರೆ ಇಟ್ಟಿತು. ಇದರಿಂದ ನಮಗೆ ಅವರ ನಿರೀಕ್ಷಣಾಶಕ್ತಿಯ ಬಗೆಗೆ ಹಾಗೂ ಅವರ ಸಂವೇದನಾಶೀಲತೆಯ ಬಗೆಗೆ ಅಪಾರ ಸೋಜಿಗವೆನಿಸುತ್ತದೆ.

ಸ್ವರ್ಗಕ್ಕಿಂತಲೂ ಮಿಗಿಲಾದ ಜನ್ಮಭೂಮಿಯಾದ ಭಾರತವು ಸ್ವಾತಂತ್ರ್ಯವಿಲ್ಲದೆ ಎಲ್ಲೆಲ್ಲೂ ಹಾಳು ಸುರಿಯುತ್ತಿರುವುದನ್ನು ಕಂಡು ಮರುಗಿದರು ರಾಮದಾಸರು. ಹನುಮಂತನು **ಬುದ್ಧಿಮತಾಂ ವರಿಷ್ಠಃ**—"ಬುದ್ಧಿವಂತರಲ್ಲಿಯೇ ಶ್ರೇಷ್ಠ" ನೆಂದೆನಿಸಿದ್ದ. ಅಲ್ಲದೆ ಮಹಾ ಬಲವಂತನೂ ಪರಾಕ್ರಮಿಯೂ ಆಗಿದ್ದ. ಆತನ ಪ್ರಯತ್ನದಿಂದಲ್ಲವೇ ಪ್ರಭು ರಾಮಚಂದ್ರನಿಗೆ ಮರಳಿ ಸೀತೆ ದೊರಕಿದ್ದು? ಹನುಮಂತನ ಉಪಾಸನೆ ಎಂದರೆ ಶಕ್ತಿಯ ಉಪಾಸನೆ. ಈ ಉಪಾಸನೆ ಭಾರತೀಯರ ಮನದಲ್ಲಿ ದೃಢವಾಗಿ ಪ್ರತಿಷ್ಠಾಪನೆಯಾಗಬೇಕು. ಆಗಲೇ ಭಾರತೀಯರಿಗೆ ಸ್ವರಾಜ್ಯ ದೊರಕೀತು. ಭಾರತೀಯರು ಹನುಮಂತನಂತೆ ಬುದ್ಧಿವಂತರೇನೋ ಹೌದು. ಅವರು ಯತ್ನ ಮಾಡಿದರೆ ಅವನಂತೆ ಬಲಶಾಲಿಗಳೂ ಆಗಬಹುದು. ಈ ಜನರಲ್ಲಿ ಹನುಮಂತನ

ಆದರ್ಶವನ್ನು ಬಿಂಬಿಸಬೇಕೆಂದು ಚಿಂತಿಸಿದರು.

ಮುಂದೆ ರಾಮದಾಸರು ಉತ್ತರ ಭಾರತದ ಹಾಗೂ ದಕ್ಷಿಣ ಭಾರತದ ಅನೇಕ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದರು. ಪ್ರತಿಯೊಂದು ಸ್ಥಳದ ಐತಿಹ್ಯದಲ್ಲಿ ಹಿಂದೆ ಘಟಿಸಿದ ಘಟನೆಗಳನ್ನು ರಾಮದಾಸರು ನೆನಪಿಸಿಕೊಂಡರು. ಮಾನವನಿಗೆ ಮಾತೃಭೂಮಿಯಲ್ಲಿ ಭಕ್ತಿಯಿದ್ದರಷ್ಟೇ ಸಾಲದು. ಅದರ ರಕ್ಷಣೆಗೆ ಶಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದುಕೊಂಡರು. ಮುಂದೆ ರಾಮದಾಸರು ಪಂಢರಾಪುರದ ವಿಠಲನ ಕ್ಷೇತ್ರಕ್ಕೆ ಬಂದರು. ಅಲ್ಲಿ ತಾಯಿ-ತಂದೆಯರ ಸೇವೆಯಲ್ಲಿ ಮಗ್ನನಾದ ಪುಂಡಲೀಕನು ವಿಠಲನನ್ನೇ ಒಂದು ಇಟ್ಟಿಗೆಯ ಮೇಲೆ ನಿಲ್ಲಿಸಿದ ಕಥೆಯನ್ನು ನೆನಪಿಸಿಕೊಂಡರು, ಹಾಗೂ ಹೀಗೆ ಯೋಚಿಸಿದರು: "ಭಗವಂತನ ಸಾಕ್ಷಾತ್ಕಾರಸಾಧನೆಗಿಂತಲೂ ತಾಯಿ-ತಂದೆಯರ ಸೇವೆಗೇ ಆದ್ಯತೆ ನೀಡಬೇಕಾದುದು ನಿಜವಾದ ಕರ್ತವ್ಯ. ಸ್ವದೇಶವೇ ತಾಯಿ, ಸ್ವಧರ್ಮವೇ ತಂದೆ, ಸ್ವದೇಶ-ಸ್ವಧರ್ಮಗಳ ಸೇವೆಗೈಯುವುದೆ ಮಾನವನ ಪರಮ ಕರ್ತವ್ಯ. ಇದನ್ನು ಮರೆತು ಭಗವಂತನ ಸಾಕ್ಷಾತ್ಕಾರವನ್ನು ಹಂಬಲಿಸಿ ಹಿಮಾಲಯ ಸೇರುವುದು, ತಪಸ್ಸುಗೈಯುವುದು ಇದೆಲ್ಲ ಸಲ್ಲ. ಮೊದಲು ಐಹಿಕ ಕರ್ತವ್ಯಗಳನ್ನು ಪೂರೈಸಿ, ಅಮೇಲೆ ಪರಮಾರ್ಥದ ಸಾಧನೆ ಮಾಡಬೇಕು."

ಭರತವರ್ಷದ ಪರ್ಯಟನೆಯಿಂದ ರಾಮದಾಸರಿಗೆ ಸಂಕಟಗ್ರಸ್ತ ದೇಶದ ದರ್ಶನವಾಯಿತು. ಅವರು ಮರಳಿ ಮಹಾರಾಷ್ಟ್ರಕ್ಕೆ ಬಂದರು. ಸಂತ ತುಕಾರಾಮರು ಶಿವಾಜಿಗೆ ರಾಮದಾಸರನ್ನು ಭೇಟಿ ಮಾಡಲು ಹೇಳಿದ್ದರು. ಆಗ ಶಿವಾಜಿಯು ಅವರ ದರ್ಶನಕ್ಕೆಂದು ಬಂದನು. ಶಿವಾಜಿಯು ರಾಮದಾಸರ ಪಾದಗಳಿಗೆ ನಮಸ್ಕರಿಸಿ, "ತಮ್ಮನ್ನೇ ನೆಚ್ಚಿ ಬಂದಿದ್ದೇನೆ. ತಾವೇ ನನಗೆ ಗುರುಗಳು. ನನಗೆ ಉಪದೇಶ ಮಾಡಿ. ಮುಕ್ತಿಸಾಧನೆಯ ಮಂತ್ರವನ್ನು ಹೇಳಿಕೊಟ್ಟು ನನ್ನನ್ನು ಉದ್ಧರಿಸಿ" ಎಂದು ಬೇಡಿಕೊಂಡನು. ಶಿವಾಜಿಯನ್ನು ನೋಡುತ್ತಲೆ ರಾಮದಾಸರಿಗೆ ಬಹಳ ಆನಂದವಾಯಿತು. ತಾವು ಈಗಾಗಲೇ ತಮ್ಮ ಮನದಲ್ಲಿ ಗುರುತಿಸಿಕೊಂಡ ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳುವಲ್ಲಿ ಶಿವಾಜಿಯು ಕಾರಣಪುರುಷನಾಗಬಲ್ಲ ಎಂಬ ಸಲ್ಲಕ್ಷಣ ಅವರಿಗೆ ಗೋಚರಿಸಿತು. ಈ ಶಿವಾಜಿಯು ಸಾಮಾನ್ಯನಲ್ಲ, ಯುಗಪುರುಷನಾಗಿ ಹೊಮ್ಮುವ ವ್ಯಕ್ತಿತ್ವವುಳ್ಳವನು ಎಂಬುದನ್ನು ರಾಮದಾಸರ ಒಳಗಣ್ಣು ಕಂಡುಕೊಂಡಿತು.

"ಶಿವಬಾ, ಈಗಲೇ ನಿನಗೆ ಪಾರಮಾರ್ಥದ ಯೋಚನೆ ಏಕೆ? ವಿಠ್ಠಲನ ಸಾಕ್ಷಾತ್ಕಾರದ ಹಂಬಲವೇಕೆ? ನೀನು ಮಾಡಬೇಕಾದ ಕೆಲಸ ಬೆಟ್ಟದಷ್ಟಿದೆ. ನಾನು ಈಗಷ್ಟೆ ಭಾರತಯಾತ್ರೆಯನ್ನು ಮುಗಿಸಿಕೊಂಡು ಬಂದಿದ್ದೇನೆ. ಈ ದೇಶ, ಧರ್ಮ ಎಷ್ಟೊಂದು ಘಾಸಿಗೊಂಡಿದೆ ಎಂಬುದನ್ನು ಬಹಳ ಹತ್ತಿರದಿಂದ ಕಂಡಿದ್ದೇನೆ. ಜನರು ತಮ್ಮ ಸ್ವಾತಂತ್ರ್ಯಕ್ಕೆ ಅಪಾಯವಿಲ್ಲದಂತೆ, ತಮ್ಮ ತಮ್ಮ ಧರ್ಮವನ್ನು ನಿರಾತಂಕವಾಗಿ ಅನುಸರಿಸಿಕೊಂಡು ಬಾಳಲು ಸಾಧ್ಯವಾಗಬೇಕು. ಆಗಲೇ ಈ ಹಾಳುಸುರಿಯುವ ಪ್ರದೇಶದಲ್ಲಿ ಆನಂದವನಭುವನ ನಲಿದೀತು. ನೀನು ನಿನ್ನ ಸ್ವರಾಜ್ಯದಲ್ಲಿ ಧರ್ಮಸ್ಥಾಪನೆ ಮಾಡಿ, ಪ್ರಜೆಗಳ ಪೀಡೆ ದೂರಮಾಡಿ, ಅವರ ಪಾಲನೆ - ರಕ್ಷಣೆ ಮಾಡುವುದರ ಮೂಲಕ ಪರಮಾರ್ಥವನ್ನು ಸಂಪಾದಿಸಬೇಕು. ನೀನು ರೋಹಿಡೇಶ್ವರನ ಸಮಕ್ಷಮದಲ್ಲಿ ಕೈಗೊಂಡ ಸ್ವರಾಜ್ಯದ ಸಂಕಲ್ಪವನ್ನು ಮರೆಯಬೇಡ. ಅದರ ಪೂರೈಕೆಯೇ ಭಗವಂತನ ಆರಾಧನೆ" ಎಂದು ಹೇಳಿದರು. ರಾಮದಾಸರ ಈ ಉಪದೇಶವಾಣಿಯನ್ನು ಶಿವಾಜಿಯು ಸಂತೋಷದಿಂದ ಸ್ವೀಕರಿಸಿದನು. ಶಿವಾಜಿಯು ರಾಮದಾಸರ ಪಾದಪೂಜೆ ಮಾಡಿದನು. "ಮಗೂ, ನೀನು ನಿನ್ನ ಜನತೆಗೆ ಭದ್ರ ಕೋಟೆಯಾಗು. ನಿನಗೆ ಶುಭವಾಗಲಿ" ಎಂದು ರಾಮದಾಸರು ಹಾರೈಸಿದರು. ಶಿವಾಜಿಗೆ ಸ್ವರಾಜ್ಯ ಸಂಸ್ಥಾಪನೆಯ ಕಾರ್ಯದಲ್ಲಿ ತಾವು ಯಾವ ರೀತಿಯಿಂದ ಸಹಕಾರ, ಸಹಾಯ ನೀಡಬಹುದು ಎಂಬುದರ ಬಗ್ಗೆ ರಾಮದಾಸರು ವಿಚಾರವಿನಿಮಯ ಮಾಡಿಕೊಂಡರು. ನಂತರ ಶಿವಾಜಿಯನ್ನು ಬೀಳ್ಕೊಡುವಾಗ ಸೂತ್ರರೂಪದಲ್ಲಿ ಕೆಲವು ಉಪದೇಶದ ನುಡಿಗಳನ್ನು ಹೇಳಿದರು. ಇದನ್ನು ರಾಮದಾಸರು ವಿರಚಿಸಿದ "ದಾಸಬೋಧೆ"ಯಲ್ಲಿ ನಾವು ಕಾಣಬಹುದು.

ಇತ್ತ ರಾಮದಾಸರು ತಮ್ಮ ಮುಂದಿನ ಕಾರ್ಯಗಳ ಬಗೆಗೆ ಯೋಚನೆ ಮಾಡುತ್ತಿದ್ದರು. ಶಿವಾಜಿಯ ಯೋಜಿತ ಸ್ವರಾಜ್ಯಕ್ಕೆ ಆದಿಲ್ ಶಾಹಿಯಿಂದ ಹೆಚ್ಚು ಗಂಡಾಂತರವಿತ್ತು. ಆದ್ದರಿಂದ ಆದಿಲ್ ಶಾಹಿಯ ಪ್ರದೇಶದಲ್ಲಿಯೇ ನೆಲೆನಿಂತು ಕಾಲಕಾಲಕ್ಕೆ ಶಿವಾಜಿಗೆ ಸಲಹೆ ಸೂಚನೆ, ಸಮಾಚಾರ ನೀಡಲು ಹತ್ತಿರದ ಕೃಷ್ಣಾತೀರದಲ್ಲಿ ವಾಸಿಸಲು ನಿರ್ಧಾರ ಮಾಡಿದರು.

ಈ ಯೋಜನೆಯನ್ನು ಕಾರ್ಯಗತ ಮಾಡುವ ಮೊದಲು ಜಾಂಬ್‌ದಲ್ಲಿಯ ತಮ್ಮ ಮನೆಗೆ ಹೋಗಿ ತಾಯಿಯ ದರ್ಶನವನ್ನು ಪಡೆಯಬೇಕೆಂದು ಇಚ್ಛಿಸಿದರು. ಜಾಂಬ್‌ನ ತಮ್ಮ ಮನೆಯ ಮುಂದೆ ನಿಂತು "ಜಯ ಜಯ ರಘುವೀರ ಸಮರ್ಥ" ಎಂದು ಕೂಗಿದರು. ಮದುವೆಯ ಹಸೆಮಣೆಯಿಂದ ಪರಾರಿಯಾದ ತನ್ನ ಮಗ ನಾರಾಯಣನನ್ನು ನೋಡಿ ರಾಣೂಬಾಯಿಗೆ ಅತ್ಯಾನಂದವಾಯಿತು. ರಾಮದಾಸರು ಒಳಗೆ ಬಂದು ತಾಯಿಯ ಪಾದಗಳಿಗೆ ನಮಸ್ಕರಿಸಿದರು. ಮಗನ ಈಗಿನ ರೂಪ ಲಕ್ಷಣಗಳನ್ನು ಕಂಡು ತಾಯಿ ಮೂಕವಿಸ್ಮಿತಳಾದಳು. ಆಕೆಯ ಬಾಯಿಂದ "ನಾರಾಯಣ, ನನ್ನ ನಾರಾಯಣ" ಎಂಬ ನುಡಿಗಳು ಹೊರಬಂದವು. "ಹೌದಮ್ಮ, ನಾನು ನಿನ್ನ ನಾರಾಯಣನೇ" ಎಂದರು.

ಕೆಲದಿನ ತಮ್ಮ ಮನೆಯಲ್ಲಿ ಕಳೆದನಂತರ ರಾಮದಾಸರು ತಮ್ಮ ಕಾರ್ಯಕ್ಷೇತ್ರವನ್ನು ಆರಿಸಿಕೊಳ್ಳಲು ದಕ್ಷಿಣಕ್ಕೆ ಸಾಗಿದರು. ಮಾರ್ಗಮಧ್ಯೆ ಅವರು ಅನೇಕ ಸ್ಥಳಗಳಲ್ಲಿ ಆಂಜನೇಯನ ಗುಡಿಗಳನ್ನು ಹಾಗೂ ಗುಡಿಗಳ ಮುಂದೆ ಗರಡಿ ಮನೆಗಳನ್ನು ಸ್ಥಾಪಿಸಿ

ವರು. ಬುದ್ಧಿವಂತನೂ ಶಕ್ತಿವಂತನೂ ಗುಣವಂತನೂ ಹಾಗೂ ಛಲವಂತನೂ ಆದ ಹನುಮನ ಆದರ್ಶ ಜನರೆದುರಿಗೆ ನಿತ್ಯ ಇರಲಿ ಎಂಬುದೇ ರಾಮದಾಸರ ಉದ್ದೇಶವಾಗಿತ್ತು.

ಶಿವಾಜಿಯು ದಿನೇ ದಿನೇ ಪ್ರಬಲನಾಗುತ್ತ ನಡೆದಂತೆ ಸ್ವರಾಜ್ಯದ ಕಕ್ಷೆ ವಿಸ್ತೀರ್ಣವಾಗುತ್ತಿದ್ದುದನ್ನು ಕಂಡು ರಾಮದಾಸರಿಗೆ ಹೇಳತೀರದ ಆನಂದವಾಗುತ್ತಿತ್ತು. ಶಿವಾಜಿ ಪ್ರತಾಪಗಢದಲ್ಲಿರುವಾಗಲೇ ಆದಿಲ್ ಶಾಹಿಯ ಸರದಾರ ಅಫ್‌ಜಲ್ ಖಾನನು ಶಿವಾಜಿಯನ್ನು ಕೊಲ್ಲುವ ಪಣತೊಟ್ಟಿದ್ದನು. ರಾಮದಾಸರಿಗೆ ಹಗಲೂ ರಾತ್ರಿ ಇದೇ ಚಿಂತೆಯಾಯಿತು. ಈ ಗಂಡಾಂತರದಿಂದ ಶಿವಬಾ ಹೇಗೆ ಪಾರಾದಾನು? ಎಂದು ಚಿಂತಿಸಿ ತುಳಜಾ ಭವಾನಿಯನ್ನು ಅವರು, "ಈ ನಿನ್ನ ಶಿವಾಜಿಯನ್ನು ನೀನೇ ಉಳಿಸಿ ಬೆಳೆಸಬೇಕು. ಅದನ್ನು ನೋಡುವ ಭಾಗ್ಯ ನನ್ನದಾಗಬೇಕು" ಎಂದು ಪ್ರಾರ್ಥಿಸಿ ತಮ್ಮ ಭಕ್ತಿ ಹಂಬಲಗಳನ್ನೆಲ್ಲಾ ಪ್ರಾರ್ಥನೆಯಲ್ಲಿ ಹರಿಸಿದರು. ಶಿವಾಜಿಯನ್ನು ಕೊಲ್ಲಲೆಂದು ಬಂದ ಅಫಜಲ್ ಖಾನನು ಶಿವಾಜಿಯಿಂದ ಹತನಾದನು. ಶಿವಾಜಿಯ ಶಕ್ತಿ-ಕೀರ್ತಿಗಳು ಬೆಳೆಯುತ್ತಿದ್ದಂತೆಯೇ ರಾಮದಾಸರು ಆನಂದ ಪರವಶರಾದರು. ಶಿವಾಜಿಯನ್ನು ಮನಃಪೂರ್ವಕವಾಗಿ ಹರಸಿದರು.

೧೬೭೪ರಲ್ಲಿ ಶಿವಪ್ರಭು ರಾಜಘಡದಲ್ಲಿ ಸಿಂಹಾಸನಾರೋಹಣ ಮಾಡಿದನು. ಛತ್ರಪತಿ ಶಿವಾಜಿ ಮಹಾರಾಜನ ರಾಜ್ಯಾಭಿಷೇಕ ಯಾರ ವೈಯಕ್ತಿಕ ಸಿದ್ಧಿಯೂ ಆಗಿರದೆ ಸಮಸ್ತ ಭಾರತೀಯರ ಆತ್ಮಾಭಿಮಾನದ ಸಂಕೇತವಾಗಿತ್ತು. ಅಂದು ಸಮಸ್ತ ಪ್ರಜಾಕುಲ ಆನಂದಸಾಗರದಲ್ಲಿ ಮುಳುಗಿದ್ದುದನ್ನು ನೋಡಿ ಸಮರ್ಥ ರಾಮದಾಸರ ಆನಂದಕ್ಕೆ ಮೇರೆಯೇ ಇರಲಿಲ್ಲ. ಅವರು ಈ ರಾಜ್ಯವನ್ನು ತಮ್ಮ ಕನಸಿನ ಆನಂದವನ ಭುವನವನ್ನಾಗಿ ಕರೆದರು.

ಮುಂದೆ ಸಹ್ಯಾದ್ರಿ ಪರ್ವತಪ್ರದೇಶದ ಸುಂದರತಾಣವಾಗಿದ್ದ ಸಜ್ಜನಘಡದಲ್ಲಿ ನೆಲೆಸಲು ರಾಮದಾಸರಿಗೆ ಶಿವಾಜಿ ವ್ಯವಸ್ಥೆ ಮಾಡಿದನು. ಇದರಿಂದ ರಾಮದಾಸರ ಧ್ಯಾನ-ಚಿಂತನಗಳಿಗೆ ಹೆಚ್ಚು ಪ್ರಶಾಂತ ವಾತಾವರಣ ದೊರಕಿದಂತಾಯಿತು. ಇಲ್ಲಿಯೇ ಅವರು ತಮ್ಮ "ದಾಸಬೋಧ" ಗ್ರಂಥವನ್ನು ರಚಿಸಿದರು. ಇದರಲ್ಲಿ ರಾಮದಾಸರು ಸಕಲ ವಿಷಯಗಳ ಬಗೆಗೆ ಚಿಂತನೆ ಮಾಡಿ ಖಚಿತ ಮಾರ್ಗದರ್ಶಕ ಉಪದೇಶಗಳನ್ನು ನೀಡಿದ್ದಾರೆ.

ಕ್ರಿ.ಶ. ೧೬೮೦ರಲ್ಲಿ ಛತ್ರಪತಿ ಶಿವಾಜಿ ಮಹಾರಾಜನು ಕಾಲವಾದನು. ಇದರಿಂದ ರಾಮದಾಸರಿಗೆ ತಡೆಯಲಾಗದ ಆಘಾತವಾಯಿತು. ಅವರ ಮನಸ್ಸು ವ್ಯಾಕುಲಗೊಂಡಿತು. ಶಿವಾಜಿಯ ಸಾವಿನ ದುಃಖದಿಂದ ಚೇತರಿಸಿಕೊಳ್ಳುವ ಮುನ್ನವೇ ರಾಮದಾಸರಿಗೆ ಇನ್ನೊಂದು ಚಿಂತೆ ಕಾದಿದ್ದಿತು. ಶಿವಾಜಿಯ ತರುವಾಯ ಸಿಂಹಾಸನವನ್ನು ಆತನ ಮಗ ಸಂಭಾಜಿರಾಜೇ ಭೋಸಲೇ ಏರಿದನು. ಸಂಭಾಜಿ ತಂದೆಯಂತೆ ಶೂರನಾದರೂ ದುರಾಗ್ರಹಿ ಮತ್ತು ಸುಖಲೋಲುಪನಾಗಿದ್ದನು. ತಂದೆಯ ಕಾಲದಲ್ಲಿ ಸ್ವರಾಜ್ಯ ಸಂಸ್ಥಾಪನೆಗೆಂದು ತಮ್ಮ ಜೀವನವನ್ನೇ ಮುಡುಪಿಟ್ಟು ಹೋರಾಡಿದ ದೇಶಪ್ರೇಮಿ ಅಧಿಕಾರಿಗಳನ್ನು ಆತನು ಮನಬಂದಂತೆ ಶಿಕ್ಷಿಸತೊಡಗಿದನು. ರಾಮದಾಸರಿಗೆ ಸಂಭಾಜಿಯ ಈ ಕಾರ್ಯಭಾರ ನೋಡಿ ಸಹಿಸಲಾಗದೆ ಅವರು ಆತನಿಗೆ ಬುದ್ಧಿವಾದದ ರೂಪವಾಗಿ ಕೆಲವು ಹಿತ ನುಡಿಗಳನ್ನು ಒಂದು ಪತ್ರದ ಮೂಲಕ ತಿಳಿಸಿದರು. ಇದನ್ನು ಓದಿದ ಸಂಭಾಜಿಯ ಕಣ್ಣು ತೆರೆಯಿತು. ಆತ ತನ್ನ ನಡತೆಯನ್ನು ತಿದ್ದಿಕೊಂಡನು.

ರಾಮದಾಸರ ಆರೋಗ್ಯ ಬಹಳ ಹದಗೆಟ್ಟಿತು. ಸಜ್ಜನಘಡದಲ್ಲಿ ಪ್ರಭು ರಾಮಚಂದ್ರನ ಪ್ರತಿಮೆಯನ್ನು ಪ್ರತಿಷ್ಠಾಪಿಸುವ ಅವರ ಬಯಕೆ ಈಡೇರುವುದಿತ್ತು. ತಂಜಾವೂರಿನಿಂದ ಶ್ರೀರಾಮನ ಸುಂದರಮೂರ್ತಿಯನ್ನು ತರಿಸಿ ಸಜ್ಜನಘಡದಲ್ಲಿ ಆ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಇಲ್ಲಿಗೆ ಅವರ ಇಷ್ಟಾರ್ಥಗಳೆಲ್ಲ ಪೂರೈಸಿದ್ದವು. ಅವರ ಚಿತ್ತವೆಲ್ಲ ಪ್ರಭು ರಾಮಚಂದ್ರನ ಮೇಲೇ ಕೇಂದ್ರೀಕೃತವಾಗಿತ್ತು.

ಸದಾ ಸರ್ವಕಾಲ ದೇವತಾ ಸಮೀಪದಲಿಹನು
ಕಾಯಕವ ಗೈಯುವವರನು ಗಮನಿಸುತಿಹನು ।
ಸುಖ, ಸೌಭಾಗ್ಯ, ಕೈವಲ್ಯಗಳ ದಯಪಾಲಿಸುವನವನು
ಉಪೇಕ್ಷಿಸನು ಶ್ರೀರಾಮ ಭಕ್ತರ ಅಭಿಮಾನಿ ತಾನು ॥

ಎಂದು ಹಾಡುತ್ತಿದ್ದಂತೆ ರಾವುದಾಸರ ಪ್ರಾಣಪಕ್ಷಿ ಹಾರಿಹೋಯಿತು. ರಾಮದಾಸರು ಕ್ರಿ.ಶ.೧೬೮೨ನೇ ವರ್ಷದ ಮಾಘ ಬಹುಳ ನವಮಿಯಂದು ತೀರಿಕೊಂಡರು. ಸಜ್ಜನಘಡದಲ್ಲಿ ಸಂಭಾಜಿ ಮಹಾರಾಜನು ಅವರಿಗಾಗಿ ಕಟ್ಟಿಸಿದ ಸಮಾಧಿಯನ್ನು ಈಗಲೂ ನೋಡಬಹುದಾಗಿದೆ. ಅವರು ತೀರಿದ ದಿನವನ್ನು "ದಾಸ ನವಮಿ" ಎಂದು ಆಚರಿಸಲಾಗುತ್ತಿದೆ. ರಾಮದಾಸರ ಕಾಲಕ್ಷೇಪಗಳು, ಕೀರ್ತನೆಗಳು ಬಹಳ ಪ್ರಸಿದ್ಧವಾಗಿವೆ. ಸಮರ್ಥ ರಾಮದಾಸರು ಜನರು ಶ್ರೀರಾಮನ ಧ್ಯಾನದ ದಿವ್ಯಗಂಗೆಯಲ್ಲಿ ಮಿಂದು ಪರಿಶುದ್ಧರಾಗುವಂತೆ ಮಾಡಿದ್ದಾರೆ. ಹಾಗೂ ಅವರು ಜನರಿಗೆ ಯಾವಾಗಲೂ ಹೀಗೆ ಹೇಳುತ್ತಿದ್ದರು: "ನಿಮ್ಮ ದೇಶ, ನಿಮ್ಮ ಜನರನ್ನು ಮರೆತು ಮುಕ್ತಿಯನ್ನು ಹುಡುಕಬೇಡಿ; ಪರಿಶುದ್ಧರಾಗಿ ಬಾಳಿ; ನಿಮ್ಮ ಸಂಸಾರದಲ್ಲಿ, ನಾಡಿನಲ್ಲಿ ನಿಮ್ಮ ಕರ್ತವ್ಯವನ್ನು ಮಾಡಿ. ಅನಂತರ ಮುಕ್ತಿಯ ಬಗ್ಗೆ ಯೋಚಿಸಿ."

ಈ ಲೇಖನದ ಪ್ರಾಯೋಜಕರು : ಶ್ರೀ ಜಿ. ವೇದಮೂರ್ತಿ ಎನ್. ವೆಂಕಟಶಿವರಾಮು, ವಿನಾಯಕ ರೈಸ್ ಇಂಡಸ್ಟ್ರೀಸ್, ಎನ್. ಹೆಚ್ ೪ ,ಅವರಗೆರೆ, ದಾವಣಗೆರೆ ೫೭೭ ೦೦೫